# *1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

***ಎಸ್‌ಸಿ.* 13 / 2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಲಿಂಗರಾಜು | | *ಪ್ರಮಾಣ ಮಾಡಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ನಿಂಗಣ್ಣ | | **07.03.2020** |
| **ವಯಸ್ಸು** | ಃ 33 **ವರ್ಷ** | | |
| **ವೃತ್ತಿ** | ಃ ಪೈಂಟರ್ | | **ಪ್ರಾ.ಸಾ. ಃ 2** |
| **ವಾಸ ಸ್ಥಳ** | ಃ ಮೈಸೂರು | | **ಚಾ.ಸಾ. ಃ 5** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

*2* ನೇ ಆರೋಪಿ ಶ್ರೀನಿವಾಸನನ್ನು ನಾನು ನೋಡಿಲ್ಲ. ತಲೆಮರೆಸಿಕೊಂಡ *1* ನೇ ಆರೋಪಿ ಹನುಮಂತ ಪಾಟೀಲನನ್ನು ನಾನು ನೋಡಿಲ್ಲ. ನಜರ್ ಬಾದ್ ಪೊಲೀಸ್ ರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿರಲಿಲ್ಲ. *2* ನೇ ಆರೋಪಿಯಿಂದ ಏನನ್ನು ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಈಗ ನೋಡುತ್ತಿದ್ದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯ ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿ-*10* ಎಂದು ಸಾಕ್ಷಿಯ ಸಹಿಯನ್ನು ನಿಪಿ- *10*(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರ ಅಡಿಯಲ್ಲಿ ಏನು ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ತಲೆ ಮರೆಸಿಕೊಂಡ *1* ನೇ ಆರೋಪಿ ಹನುಮಂತ ಪಾಟೀಲ್ ನಿಂದ ಏನು ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ, ಸದರಿ ದಾಖಲೆಯ ಇನ್ನೊಂದು ಅಮಾನತ್ತು ಪಂಚನಾಮೆಯಾಗಿದ್ದು, ಅದನುನ ನಿಪಿ-*11* ಎಂದು ಸಾಕ್ಷಿಯ ಸಹಿಯನ್ನು ನಿಪಿ-*11*(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರ ಅಡಿಯಲ್ಲಿ ಏನು ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್ ರು ನನ್ನನ್ನು ಕೂಗಿದರು ನಾನು ಅಲ್ಲಿ ಹೋದಾಗ ನನ್ನ ಹತ್ತಿರ ಎರಡು ಸಹಿ ಮಾಡಿಸಿಕೊಂಡರು.

*ಈ ಹಂತದಲ್ಲಿ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

ದಿನಾಂಕ **16.06.2015** ರಂದು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ **2** ನೇ ಆರೋಪಿ ಶ್ರೀನಿವಾಸ್ ನಿಂದ ಒಂದು ಆಕ್ಟಿವಾ ಸ್ಕೂಟರ್ ನ್ನು ಹಾಗೂ ನಗದು ಹಣ **30** ಸಾವಿರ ರೂಗಳನ್ನು, ನಿವೇಶನಕ್ಕೆ ಸಂಬಂದಪಟ್ಟ ಸ್ಥಿರ ಸ್ವತ್ತಿನ ಶುದ್ಧ ಕ್ರಯ ಪತ್ರದ ಅಸಲು ಜನರಲ್ ಪವರ್ ಪಾಟರ್ನಿಯ ಅಸಲು ಪ್ರತಿ, ಮನೆ ಕಂದಾಯ ಪಟ್ಟ ಮತ್ತು ಎರಡು ರಶೀದಿಗಳು ಮತ್ತು ಮನೆಯ ಕಂದಾಯ ಪಟ್ಟಾ ರಶೀದಿ ಪುಸ್ತಕ ಹಾಗೂ **6** ರಶೀದಿಗಳು, ಗ್ರಾಮೀಣ ಅಭಿವೃದ್ದಿ ಹಾಗೂ ಪಂಚಾಯತ್ ರಾಜ್ ಇಲಾಖೆಯ **11** ನಮೂನೆ , ಪಿರ್ಯಾದಿಗೆ ಸೇರಿದ ಮನೆಯ ಬೀಗದ ಕೈಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ನಿಪಿ-**10** ರಂತೆ ಮಹಜರ್ ನ್ನು ಸಮಯ **2.30** ರಿಂದ **3.30** ರ ವರೆಗೆ ಬರೆದಿರುತ್ತಾರೆ ಅಂದರೆ ಸರಿಯಲ್ಲ.

ಅದೇ ದಿನ ಸಂಜೆ **5** ಗಂಟೆಯಿಂದ **5.45** ಗಂಟೆಯವರೆಗೆ ತಲೆ ಮರೆಸಿಕೊಂಡು ಮೊದಲನೇ ಆರೋಪಿಯ ಕಡೆಯಿಂದ **18** ಸಾವಿರ ರೂಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ನಿಪಿ-**11** ರಂತೆ ಮಹಜರ್ ನ್ನು ಬರೆದಿರುತ್ತಾರೆ ಅಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

*ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ-*

ಆರೋಪಿ ಪರ ವಕೀಲರವರಿಂದ ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

*ಮರು ವಿಚಾರಣೆಃ- ಇಲ್ಲ.*

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

**07.02.2020**

*1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*